**ದಿಃ 23/06/2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ**

ನಮ್ಮ ತಂದೆ ಖರೀದಿಸುವ ಕಾಲಕ್ಕೆ ಕಂದಾಯ ಉತಾರೆಯಲ್ಲಿ ಸಾಮಾನ್ಯವಾಗಿ 1 ಗುಂಟೆ ಜಮೀನನ್ನು ನಮೂದಿಸುತ್ತಿದ್ದರು ಎಂದರೆ ಸರಿ. ಆ ಸಮಯಕ್ಕೆ ಅರ್ಧ ಗುಂಟೆ ಜಾಗದ ನಮೂದು ಉತಾರೆಯಲ್ಲಿ ಆಗುತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯು ನನ್ನ ತಂದೆಯ ಬಳಿ ಅರ್ಧ ಗುಂಟೆ ಜಮೀನನ್ನು ನೊಂದಣಿ ದಾಖಲೆ ಮೂಲಕ ಖರೀದಿಸಿರುತ್ತಾನೆ ಎಂದರೆ ಸರಿಯಲ್ಲ. ಅರ್ಧ ಗುಂಟೆ ಜಮೀನು ಕಂದಾಯ ಉತಾರೆಯಲ್ಲಿ ನಮೂದು ಮಾಡಲು ಬರದ ಕಾರಣ ಹಾಗೆ ಉಳಿಯಿತು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಮೃತನಾದ ನಂತರ ನಾನು ಮತ್ತು 2 ಮತ್ತು 3 ನೇ ವಾದಿಯರು ವಾರಸಾ ಖಾತೆ ಮಾಡಿಸಿಕೊಂಡೆವು ಎಂದರೆ ಸರಿ. ನಮ್ಮ ಕುಟುಂಬದ ಅಡಚಣೆಗಾಗಿ ನನ್ನ ತಂದೆ ದಾವಾ ಸ್ವತ್ತಿನಲ್ಲಿ ಅರ್ಧ ಗುಂಟೆ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಗ್ರಾಮ ಪಂಚಾಯಿತಿ ದಾಖಲೆಯಲ್ಲಿ ಮಾರಾಟ ಮಾಡುವ ಮುಂಚೆ ದಾಖಲು ಮಾಡಿಸಿದ್ದನು ಎಂದರೆ ಸರಿ. ಅದರ ಸಂಖ್ಯೆ 2/3 ಎಂದರೆ ನನಗೆ ಗೊತ್ತಿಲ್ಲ. ಅದರಲ್ಲಿ ಅರ್ಧ ಗುಂಟೆ ಜಮೀನನ್ನು ಪ್ರತಿವಾದಿಗೆ ಮಾರಾಟ ಮಾಡಿ ಉಳಿದ ಅರ್ಧ ಗುಂಟೆ ಜಮೀನನ್ನು ಬಸಪ್ಪ ಬಾಗೇವಾಡಿ ಅವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಬಸಪ್ಪನವರು ಹಣಮಂತ ಧನ್ನೂರ ಅವರಿಗೆ ಮಾರಾಟ ಮಾಡಿದರು ಎಂದರೆ ನನಗೆ ಗೊತ್ತಿಲ್ಲ.

ದಾವಾ ಸ್ವತ್ತಿನ ಪಂಚಾಯಿತಿ ಸಂಖ್ಯೆ 447 ಇರುತ್ತದೆ. ಸದರಿ ಆಸ್ತಿಯ ಪೂರ್ವಕ್ಕೆ ಆಸ್ತಿ ಸಂಖ್ಯೆ 118, ಪಶ್ಚಿಮಕ್ಕೆ ಇರುವ ಆಸ್ತಿ ಸಂಖ್ಯೆ ಗೊತ್ತಿಲ್ಲ. ನಾನು ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಊರಹಿರಿಯರಿಂದ ಬುದ್ದಿವಾದ

ಹೇಳಿಸಿದ್ದೇನೆ ಎಂದು ಸುಳ್ಳಾಗಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಂಚಾಯಿತಿ ಅವರ ಜೊತೆ ಸೇರಿ ಖೊಟ್ಟಿ ದಾಖಲೆ ಸೃಷ್ಟಿಸಿ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಓ ಹೇ ಕೇ ಸರಿ ಅದೆ.

ಸಿವ್ಹಿಲ್ ನ್ಯಾಯಾಧೀಶರು, ಮುದ್ದೇಬಿಹಾಳ.